## 51. ಇಲಾಖೆಗಳ ವೆಚ್ಚಕ್ಕೆ ಮೂಗುದಾರ

ರಾಜ್ಯ ಸರ್ಕಾರಿ ನೌಕರರ ಸಂಬಳ ಮತ್ತು ಪಿಂಚಣಿ ಬಿಟ್ಟು ಉಳಿದ ಎಲ್ಲ ಖರ್ಚು ವೆಚ್ಚಗಳಿಗೆ ಆರ್ಥಿಕ ಇಲಾಖೆ ಕಟ್ಟುನಿಟ್ಟಿನ ಕಡಿವಾಣ ಹಾಕಿದೆ. ಇಲಾಖೆಯಲ್ಲಿ ಸರ್ಕಾರಿ ಕಛೇರಿ ನಡೆಸಲು ಅಗತ್ಯವಿರುವ ಆಡಳಿತಾತ್ಮಕ ವೆಚ್ಚ, ಕಟ್ಟಡದ ಖರ್ಚು, ಬಾಡಿಗೆ, ಸಾರಿಗೆ ವೆಚ್ಚವನ್ನು ಭರಿಸಲು ಮಾತ್ರ ಹಣವನ್ನು ತೆಗೆಯಲು ಅವಕಾಶ ನೀಡಲಾಗಿದೆ. ಹೊಸ ವಾಹನಗಳ ಖರೀದಿ, ಪೀಠೋಪಕರಣಗಳ ಖರೀದಿ, ಕಟ್ಟಡ ರಿಪೇರಿ ಮತ್ತು ಹೊಸ ಕಟ್ಟಡ ರಿಪೇರಿ ಮತ್ತು ಹೊಸ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕೈ ಹಾಕಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಪಂಚಾಯತ್‌ರಾಜ್ ಇಲಾಖೆಯ ಇಂಜಿನಿಯರಿಂಗ್ ವಿಭಾಗದಲ್ಲಿ ದಿನಗೂಲಿ ನೌಕರರು ಮತ್ತು ಸಿಬ್ಬಂದಿಗೆ ಏಪ್ರಿಲ್ ತಿಂಗಳ ವೇತನ ನೀಡಲು ಹಣಕಾಸು ಇಲಾಖೆ ರೂ.2.14 ಕೋಟಿ ಬಿಡುಗಡೆ ಮಾಡಿದೆ.

ಆಧಾರ:ಪ್ರಜಾವಾಣಿ, ದಿನಾಂಕ:30.04.2020